

ನಾದಲೀಲೆಗೆ ಒಲಿದ ಪ್ರಶಸ್ತಿ ಪುರಸ್ಕಾರಗಳೊಂದಿಗೆ ಮಳವಳ್ಳಿ ಎಂ. ಮಹಾದೇವಸ್ವಾಮಿ

ಹಲವು ವರ್ಷಗಳ ಕಾಲ ನಿಮ್ಮ ಗೀತೆಗಳಿಂದ ಹಣ ಮಾಡುತ್ತಾರೆ. ನೀವೇ ಕ್ಯಾಸೆಟ್ ಮಾಡಿ ಮಾರಾಟ ಮಾಡಿ' ಎಂದು ಸಲಹೆ ನೀಡಿದರು.

ಕೈಯಲ್ಲಿ ಕಾಸಿಲ್ಲದ ಹೊತ್ತಿನಲ್ಲಿ ಮಹಾದೇವಸ್ವಾಮಿ ಕ್ಯಾಸೆಟ್ ಮಾಡುವ ಸಾಹಸಕ್ಕೆ ಕೈ ಹಾಕಿದರು. ಬಡ್ಡಿ ಸಾಲ ಮಾಡಿದರು, ಪತ್ನಿಯ ಒಡವೆ ಅಡ ಇಟ್ಟರು. ಹಣ ಸಾಲದಾದಾಗ ಮನೆಯಲ್ಲಿದ್ದ ಆಟೊ ಮಾರಾಟ ಮಾಡಿದರು. ₹ 30 ಸಾವಿರ ಹೊಂದಿಸಿ 'ಸಿದ್ದಪ್ಪಾಜಿ ಪವಾಡ'ವನ್ನು 3 ಭಾಗದ ಕ್ಯಾಸೆಟ್‌ನಲ್ಲಿ ಹೊರತಂದರು. 3 ಕ್ಯಾಸೆಟ್‌ಗಳಿಗೆ ₹ 90 ಬೆಲೆ ನಿಗದಿ ಮಾಡಲಾಗಿತ್ತು.

ಕ್ಯಾಸೆಟ್ ಮಾರಾಟವಾಗದಿದ್ದರೆ ಸಾಲ ಮೈಮೇಲೆ ಬರುತ್ತದೆ, ಜೀವನವೇ ಹಾಳಾಗುತ್ತದೆ ಎಂಬ ಭಯ ಮಹಾದೇವಸ್ವಾಮಿ ಅವರಿಗಿತ್ತು. ಆ ಭಯದಲ್ಲೂ ಸಿದ್ದಪ್ಪಾಜಿ ಮೇಲೆ ಭಾರ ಹಾಕಿ 3 ಸಾವಿರ ಕ್ಯಾಸೆಟ್ ಹೊರ ತಂದರು. ಅದೇ ಸಂದರ್ಭದಲ್ಲಿ ಆರಂಭವಾಗಿದ್ದ ಚಿಕ್ಕಲೂರು ಜಾತ್ರೆಯಲ್ಲಿ ಟೆಂಟ್ ಹಾಕಿ, ಮೈಕ್ ಕಟ್ಟಿ, ಸಿದ್ದಪ್ಪಾಜಿ ಪವಾಡದ ಕ್ಯಾಸೆಟ್ ಹಾಕಿದರು. ಆಮೇಲೆ ನಡೆಯಿತು ನೋಡಿ ಮೋಡಿ. ಮಹಾದೇವಸ್ವಾಮಿ ಅವರ ಕಂಚಿನ ಕಂಠ ಜಾತ್ರೆಯನ್ನು ಆವರಿಸಿಕೊಂಡಿತು. ಆ ಗಾಯನಕ್ಕೆ ಮನಸೋತ ಜನರು ಮುಗಿಬಿದ್ದು ಕ್ಯಾಸೆಟ್ ಖರೀದಿ ಮಾಡಿದರು.

ನಂತರ ಕ್ಯಾಸೆಟ್ ಲೋಕದಲ್ಲಿ ಮಹಾದೇವಸ್ವಾಮಿ ಅವರು ಹಿಂದಿರುಗಿ ನೋಡಲಿಲ್ಲ. ಒಂದಾದ ನಂತರ ಒಂದರಂತೆ ನೂರಾರು ಕ್ಯಾಸೆಟ್ ಹೊರಬರುತ್ತವೆ. ವಿಡಿಯೊ ಮುದ್ರಣಗಳೂ ಹೊರಬಂದಿವೆ. ಅವುಗಳೂ ದೊಡ್ಡ ಸಂಖ್ಯೆಯಲ್ಲಿ ಮಾರಾಟವಾಗಿವೆ.

## ಕೈ ಹಿಡಿದ ಮಹಾದೇಶ್ವರ

'ಮಹಾದೇಶ್ವರ ಮಹಿಮೆ' ಧ್ವನಿಸುರುಳಿಯ 'ಮಹಾದೇಶ್ವರಾ... ದಯೆ ಬಾರದೆ' ಅಪಾರ ಜನಪ್ರಿಯತೆ ಗಳಿಸಿರುವ ಗೀತೆ. ಮಲೆಮಹದೇಶ್ವರ ದೇವಾಲಯದಲ್ಲೂ ಈ ಗೀತೆ ಮೊಳಗುತ್ತದೆ. ಈಗಲೂ ಜನರ ನಾಲಗೆ ಮೇಲೆ ನಲಿದಾಡುತ್ತಿದೆ. ಸಿ. ಅಶ್ವಥ್ ಅವರು ಭಾವಗೀತೆಯೊಂದಕ್ಕೆ ಮಾಡಿದ್ದ ರಾಗಸಂಯೋಜನೆಯನ್ನು ಬಳಸಿಕೊಂಡು, ಮಾದೇಶ್ವರನ ಮೇಲೆ ಸಾಹಿತ್ಯ ಬರೆದು ಹಾಡಿ, ಅಭಿನಯಿಸಿದ್ದ ಈ ವಿಡಿಯೊ ಗೀತೆ ಮಹಾದೇವಸ್ವಾಮಿ ಅವರಿಗೆ ದೊಡ್ಡ ಹೆಸರು ತಂದುಕೊಟ್ಟಿದೆ. ಈ ಗೀತೆಯ ಮೂಲಕವೇ ಅವರನ್ನು ಜನ ಗುರುತಿಸುತ್ತಾರೆ. ಅವರು ವಿದೇಶಗಳಿಗೆ ಹೋದಾಗಲೂ ಅಲ್ಲಿಯ ಕನ್ನಡಿಗರು ಒತ್ತಾಯಪೂರ್ವಕವಾಗಿ ಈ ಹಾಡು ಹಾಡಿಸಿದ್ದಾರೆ.

ಮಹಾದೇವಸ್ವಾಮಿ ಅವರ ಜನಪದ ಸೇವೆಗೆ ನೂರಾರು ಪ್ರಶಸ್ತಿ, ಬಿರುದು, ಗೌರವಗಳು ಸಂದಿವೆ. ನೀಲಗಾರರ ಪದಗಳ ಹಾಡಿಗೆ ಈಚೆಗಷ್ಟೇ ಜನಪದ ಅಕಾಡೆಮಿಯು ಪ್ರಶಸ್ತಿ ಘೋಷಣೆ ಮಾಡಿದೆ. 5 ದಶಕಗಳ ಅವರ ಗಾನಯಾನಕ್ಕೆ ಮೈಸೂರು ವಿಶ್ವವಿದ್ಯಾಲಯ ಇದೀಗ ಗೌರವ ಡಾಕ್ಟರೇಟ್ ಘೋಷಿಸಿದೆ. ಪುನೀತ್ ರಾಜ್‌ಕುಮಾರ್ ಮರಣೋತ್ತರ ಗೌರವ ಡಾಕ್ಟರೇಟ್ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಮಹಾದೇವಸ್ವಾಮಿಯವರೂ ಡಾಕ್ಟರೇಟ್ ಗೌರವಕ್ಕೆ ಪಾತ್ರರಾಗಿದ್ದಾರೆ.

'ಇತಿಹಾಸ, ಪರಂಪರೆ ಉಳಿಯಬೇಕಾದರೆ ಜನಪದ ಸಂಸ್ಕೃತಿ ಉಳಿಯಬೇಕು. ಬಾಯಿಯಿಂದ ಬಾಯಿಗೆ ಬಂದ ಜನಪದ ಗೀತೆಗಳು ಮುಂದಿನ ಪೀಳಿಗೆಗೂ ಸಾಗಬೇಕು. ಯುವ ಪೀಳಿಗೆ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಬೇಕು. ಆದರೆ ಯುವಪೀಳಿಗೆ ಸಿನಿಮಾ ಹಾಡುಗಳಿಗೆ ಮರುಳಾಗುತ್ತಿದೆ. ಇಂದು ಹುಟ್ಟುವ ಸಿನಿಮಾ ಹಾಡುಗಳು ಇಂದೇ ಸಾಯುತ್ತಿವೆ. ಹೀಗಾಗಿ ಪರಂಪರೆಯ ಜನಪದ ಸಾಹಿತ್ಯ, ಗೀತೆಗಳ ಕಲಿಕೆಯತ್ತ ಯುವಕರು ಬರಬೇಕು, ಜನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು' ಎನ್ನುವುದು ಮಹಾದೇವಸ್ವಾಮಿ ಅವರ ಕಳಕಳಿ.

ಪ್ರತಿಕ್ರಿಯಿಸಿ: feedback@sudha.co.in